# ಸರ್ಕಾರಿ ನೌಕರರಿಗೆ ಸಿಗುವಂತಹ ಸೌಲಭ್ಯಗಳು

1. ನೇಮಕಾತಿ– ನೇರನೇಮಕಾತಿ (ಕೆಪಿಎಸ್‌ಸಿ, ಸ್ಪರ್ಧಾತ್ಮಕ ಪರೀಕ್ಷೆಗಳು, ಅನುಕಂಪದ ಆಧಾರ)
2. 2 ವರ್ಷಗಳ ಪರಿವೀಕ್ಷಣಾ ಅವಧಿ –ಕೆ.ಸಿ.ಎಸ್ (ಪರಿವೀಕ್ಷಣಾ ಅವಧಿ) ನಿಯಮಗಳು 1977– ನಿಗದಿತ ಅವಧಿಯೊಳಗೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದಿದ್ದಲ್ಲಿ, ಒಂದು ವರ್ಷಗಳ ಅವಧಿಗೆ ವಿಸ್ತರಣೆ. ಈ ಅವಧಿ ವಿಸ್ತರಣೆ ನಂತರದ ಅವಧಿಯಲ್ಲಿ ಉತ್ತೀರ್ಣರಾದಲ್ಲಿ ಸರ್ಕಾರಕ್ಕೆ ಪರಿವೀಕ್ಷಣೆ ಅವಧಿ ವಿಸ್ತರಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. – ಈ ವಿಸ್ತರಣೆ ನಂತರವೂ ಉತ್ತೀರ್ಣರಾಗದಿದ್ದಲ್ಲಿ ಇದೇ ನಿಯಮಗಳಲ್ಲಿ ವಿವರಿಸಿರುವಂತೆ ಶಿಸ್ತು ಕ್ರಮ ಜರುಗಿಸಬೇಕು. – ಸೇವೆಯಿಂದ ತೆಗೆದುಹಾಕಬಹುದು. ಇತ್ತೀಚೆಗೆ ಸರ್ಕಾರಿ ಆದೇಶದ ಪ್ರಕಾರ ಎಲ್ಲಾ ನೌಕರರೂ ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇ ಬೇಕು (ಸರ್ಕಾರಿ ಆದೇಶ ಸಿಆಸುಇ 43 ಸೇವನೆ 2008 ದಿನಾಂಕ 07.03.2012)
3. ಪರಿವೀಕ್ಷಣಾ ಅವಧಿಯೊಳಗೆ ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. – ಕೆ.ಸಿ.ಎಸ್ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು 1974
4. ಪ್ರತೀ ತಿಂಗಳ ವೇತನ ಹಾಗೂ ಪ್ರತೀ ವರ್ಷ ನಿಗದಿತ ಮಾಹೆಯಲ್ಲಿ ವೇತನ ಬಡ್ತಿ. (ತಡೆ ಹಿಡಿಯಲು ನಿರ್ದಿಷ್ಟ ಆದೇಶ ಇಲ್ಲದಿದ್ದಲ್ಲಿ) (ಕೆಸಿಎಸ್‌ಆರ್ ನಿಯಮ 51)
5. 10 ವರ್ಷಗಳ ಬಡ್ತಿ ಇಲ್ಲದ ಸತತ ಸೇವೆಗೆ ಕಾಲಮಿತಿ ವೇತನ ಬಡ್ತಿ (ಸರ್ಕಾರಿ ಆದೇಶ ಎಫ್‌ಡಿ 60 ಎಸ್‌ಆರ್‌ಪಿ 84 ದಿ:23.08.1984 (ದಿನಾಂಕ 01.04.1984 ರಿಂದ ಜಾರಿಗೆ)
6. 15 ವರ್ಷಗಳ ಬಡ್ತಿ ಇಲ್ಲದ ಸತತ ಸೇವೆಗೆ ಸ್ವಯಂಚಾಲಿತ ವಿಶೇಷ ವೇತನ ಬಡ್ತಿ (ಸರ್ಕಾರಿ ಆದೇಶ ಎಫ್‌ಡಿ 25 ಎಸ್‌ಆರ್‌ಪಿ 1991 ದಿ: 29.10.1991 (ದಿ: 01.06.1991 ರಿಂದ ಜಾರಿಗೆ)
7. 20 ವರ್ಷಗಳ ಬಡ್ತಿ ಇಲ್ಲದ ಸತತ ಸೇವೆಗೆ ಒಂದನೇ ಹೆಚ್ಚುವರಿ ವೇತನ ಬಡ್ತಿ (ಸರ್ಕಾರಿ ಆದೇಶ ಎಫ್‌ಡಿ 16 ಎಸ್‌ಆರ್‌ಪಿ 2002 ದಿನಾಂಕ 09.05.2002) (ದಿನಾಂಕ 01.04.2002 ರಿಮದ ಜಾರಿಗೆ ಬಂದಿದೆ)
8. 25 ವರ್ಷಗಳ ಬಡ್ತಿ ಇಲ್ಲದ ಸತತ ಸೇವೆಗೆ ಎರಡನೇ ಹೆಚ್ಚುವರಿ ವೇತನ ಬಡ್ತಿ(ಸರ್ಕಾರಿ ಆದೇಶ ಎಫ್‌ಡಿ 12 ಎಸ್‌ಆರ್‌ಪಿ 2012(VIII) ದಿನಾಂಕ: 14.06.2012 (ದಿ: 01.04.2012 ರಿಂದ ಜಾರಿ)
9. 30 ವರ್ಷಗಳ ಬಡ್ತಿ ಇಲ್ಲದ ಸತತ ಸೇವೆಗೆ ಮೂರನೇ ಹೆಚ್ಚುವರಿ ವೇತನ ಬಡ್ತಿ (ಸರ್ಕಾರಿ ಆದೇಶ ಎಫ್‌ಡಿ 12 ಎಸ್‌ಆರ್‌ಪಿ 2012(VIII) ದಿನಾಂಕ: 14.06.2012 (ದಿ: 01.04.2012 ರಿಂದ ಜಾರಿ)
10. ವೇತನ ಶ್ರೇಣಿಯ ಗರಿಷ್ಠ ಹಂತದ ಮುಕ್ತಾಯದ ನಂತರ ಸ್ಥಗಿತ ವೇತನ ಬಡ್ತಿಗಳು– ( ಗರಿಷ್ಠ 08 ಸ್ಥಗಿತ ವೇತನ ಬಡ್ತಿಗಳನ್ನು ನೀಡಬಹುದು) (ಸರ್ಕಾರಿ ಆದೇಶ ಎಫ್‌ಡಿ 12 ಎಸ್‌ಆರ್‌ಪಿ 2012(VII) ದಿನಾಂಕ: 14.06.2012 (ದಿ: 01.04.2012 ರಿಂದ ಜಾರಿ)

Scanned by CamScanner

11. ರಜಾ ಸೌಲಭ್ಯಗಳು– ನೇಮಕಾತಿಯ ಪ್ರಥಮ ವರ್ಷಗಳಲ್ಲಿ ಪ್ರತೀ ಮಾಹೆ ಸೇವೆ ಮುಗಿದ ನಂತರ 1 ಅಕಸ್ಮಿಕ ರಜೆ, 2½ ಗಳಿಕೆ ರಜೆ, ಪ್ರತೀ 3 ತಿಂಗಳ ನಂತರ 05 ದಿನಗಳ ಪರಿವರ್ತಿತ ರಜೆ–ನಂತರದ ವರ್ಷಗಳಲ್ಲಿ – ವರ್ಷಕ್ಕೆ 30 ಗಳಿಕೆ ರಜೆ, ವರ್ಷಕ್ಕೆ 15 ಅಕಸ್ಮಿಕ ರಜೆ, 20 ಅರ್ಧವೇತನ ರಜೆ. (10 ಪರಿವರ್ತಿತ ರಜೆ), ಹಾಗೂ ಕೆಸಿಎಸ್‌ಆರ್ ನಿಯಮಗಳ ರೀತ್ಯ ಇತರೆ ರಜೆಗಳು. (ಕೆಸಿಎಸ್‌ಆರ್– ರಜೆ ನಿಯಮಗಳು–105 ರಿಂದ 206)
12. ಪ್ರತೀ ವರ್ಷ 15 ದಿನಗಳ ಗಳಿಕೆ ರಜೆ ಅಧ್ಯರ್ಪಣೆ –ನಗದೀಕರಣ ಸೌಲಭ್ಯ. ವೈದ್ಯಕೀಯ ವೆಚ್ಚಗಳ ಮರುಪಾವತಿ. ಸರ್ಕಾರಿ ಆದೇಶ ಎಫ್‌ಡಿ 104 ಸೇನಿಸೇ 2017 ದಿ: 20.11.2017
13. ದಿ.1.4.2006 ಕ್ಕೂ ಹಿಂದಿನ ನೌಕರರಿಗೆ –ಭವಿಷ್ಯ ನಿಧಿ ಸೌಲಭ್ಯ ಇದೆ– ಇದರಲ್ಲಿ ಮುಂಗಡ, ಭಾಗಶಃ ಹಿಂಪಡೆಯುವುದು, ಧಾರ್ಮಿಕ ಕಾರ್ಯಗಳ ಆಚರಣೆ, ಮಕ್ಕಳ ವಿವಾಹ, ಮನೆ ನಿರ್ಮಾಣ/ಖರೀದಿ ಗಳಿಗಾಗಿ. ನಿವೃತ್ತಿ ನಂತರ ಪೂರ್ಣ ಪಾವತಿ.– 01.04.2006 ರ ನಂತರದ ನೌಕರರಿಗೆ ನೂತನ ಪಿಂಚಣಿ ಯೋಜನೆ ಇರುವ ಕಾರಣ ಭವಿಷ್ಯ ನಿಧಿ ಇರುವುದಿಲ್ಲ.
14. ಪ್ರಯಾಣ ಭತ್ಯೆಗಳ ಸೌಲಭ್ಯ.– ಎ,ಬಿ.ಸಿ.ಡಿ ವೃಂದದ ನೌಕರರಿಗೆ ಅವರ ವೇತನದ ಅರ್ಹತೆಗೆ ತಕ್ಕಂತೆ. (ಕೆಸಿಎಸ್‌ಅರ್ ನಿಯಮಗಳು 449 ರಿಂದ 571)
15. ದಿ.1.4.2006 ಕ್ಕೂ ಹಿಂದಿನ ನೌಕರರಿಗೆ ನಿವೃತ್ತಿ ವೇತನ, ಕುಟುಂಬ ನಿವೃತ್ತಿ ವೇತನ ಸೌಲಭ್ಯ ಹಾಗೂ ದಿ.1.4.2006 ಕ್ಕೂ ನಂತರ ನೌಕರರಿಗೆ ನೂತನ ಪಿಂಚಣಿ ಯೋಜನೆ– ಇದರಲ್ಲಿ ನೌಕರರು ವೇತನದ (ಮೂಲವೇತನ+ತುಟ್ಟಿಭತ್ಯೆ ಸೇರಿ) ಶೇಕಡ 10 ರಷ್ಟು ಪಾವತಿಸಬೇಕು. ಸರ್ಕಾರವೂ ಸಹಾ ಶೇಕಡಾ 10 ರಷ್ಟು ನೀಡುವುದು. ನಿವೃತ್ತ ಪಿಂಚಣಿಯಲ್ಲಿ ಮರಣ ಉಪದಾನ, ಪರಿವರ್ತಿತ ನಿವೃತ್ತಿ ವೇತನ ದೊರೆಯುತ್ತದೆ. (ಕೆಸಿಎಸ್‌ಆರ್ ನಿಯಮಗಳು 207 ರಿಂದ395 ರವರೆಗೆ) ಸಿಸಿಎ / ಕ್ರಿಮಿನಲ್ ವಿಚಾರಣೆ ಇದ್ದ ನೌಕರರಿಗೆ ತಾತ್ಕಾಲಿಕ ಪಿಂಚಣಿ. (ಕೆಸಿಎಸ್‌ಆರ್ ನಿಯಮ 341)
16. ಪ್ರತೀ ವರ್ಷ ಮಾರ್ಚಿ ಅಂತ್ಯಕ್ಕೆ ಎಲ್ಲಾ ವೃಂದದ ನೌಕರರೂ ಆಸ್ತಿ–ಜವಾಬ್ದಾರಿ ತಃಖ್ತೆಯನ್ನು ನಮೂನೆ 1 ಮತ್ತು 2 ರಲ್ಲಿ ಕಡ್ಡಾಯವಾಗಿ ನೀಡಬೇಕು, ಎ.ಬಿ.ಸಿ ವೃಂದದ ನೌಕರರೆಲ್ಲರೂ ಕಡ್ಡಾಯವಾಗಿ ಕಾರ್ಯನಿರ್ವಹಣಾ ವರದಿಗಳನ್ನೂ ನೀಡಬೇಕು.–ಕೆ.ಸಿ.ಎಸ್(ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000. ಡಿ ಗುಂಪು ನೌಕರರು ಮಾತ್ರ ಆಸ್ತಿ–ಜವಾಬ್ದಾರಿ ತಃಖ್ತೆ ನೀಡಬೇಕು. (ಸರ್ಕಾರಿ ಆದೇಶ ಸಿಆಸುಇ 90 ಸೇನಿಸಿ 2014 ದಿನಾಂಕ 01.08.2015)
17. ನೌಕರರ ದುರ್ನಡತೆಗಾಗಿ ಹಾಗೂ ಇನ್ನಿತರ ನೌಕರರ ವರ್ತನೆಗಳಿಗಾಗಿ – ಕೆಸಿಎಸ್ (ನಡತೆ) ನಿಯಮಗಳು 1966
18. ಶಿಸ್ತು ಕ್ರಮ ಕೈಗೊಳ್ಳಲು –ಕೆಸಿಎಸ್(ಸಿಸಿಎ) ನಿಯಮಗಳು 1957 – ನೌಕರರ ಅಮಾನತ್ತು ಇದೇ ನಿಯಮ 10 ರ ಪ್ರಕಾರ, ನೌಕರರ ದುರ್ನಡತೆಗಳು, ಕರ್ತವ್ಯ ಲೋಪಗಳ ವಿಚಾರಣೆ ನಿಯಮ 11–ವಿಸ್ತೃತ /ಧೀರ್ಘ ವಿಚಾರಣೆ , ನಿಯಮ 12 ಸಂಕ್ಷಿಪ್ತ ವಿಚಾರಣೆ, ನಿಯಮ 13 ಜಂಟಿ ವಿಚಾರಣೆ, ಇದೇ ನಿಯಮ 11(2) ರ ಪ್ರಕಾರ ವಿಚಾರಣಾಧಿಕಾರಿಗಳ ನೇಮಕ, ಇದೇ ನಿಯಮ 11(5)(ಸಿ) ರ ಪ್ರಕಾರ ಮಂಡನಾಧಿಕಾರಿಗಳ ನೇಮಕಾತಿ, ಇದೇ ನಿಯಮ 08 ರ ಪ್ರಕಾರ

Scanned by CamScanner

ದಂಡನೆ ವಿಧಿಸುವುದು. (ದಂಡನೆಗಳಲ್ಲಿ 2 ವಿಧ –ಲಘು ದಂಡನೆ ಅಥವಾ ಕಠಿಣ ದಂಡನೆಗಳು) 09 ತಿಂಗಳ ಅವಧಿಯೊಳಗೇ ಶಿಸ್ತುಕ್ರಮ/ವಿಚಾರಣೆ/ದಂಡನೆ ವಿಧಿಸುವ ಪ್ರಕ್ರಿಯೆಗಳು ಮುಕ್ತಾಯವಾಗಬೇಕು. (ಸರ್ಕಾರಿ ಆದೇಶ ಸಿಆಸುಇ 12ಸೇಇವಿ2003 ದಿನಾಂಕ 11.09.2003) ( ದಂಡನೆಗಳಿಗೆ ಸರ್ಕಾರಿ ಆದೇಶ ಸಿಆಸುಇ 18 ಸೇಇವಿ2001 ದಿನಾಂಕ 14.09.2001)

19. **ಸಿಬ್ಬಂದಿ, ನೇಮಕಾತಿ, ಮುಂಬಡ್ತಿ, ಹಾಗೂ ವೇತನ, ಜೇಷ್ಠತಾ ಪಟ್ಟಿ ಮತ್ತಿತರ ವಿಚಾರಗಳಿಗೆ ಸಂಬಂಧಿಸಿದ ಪ್ರಮುಖ ಕಾನೂನು ಪುಸ್ತಕಗಳ ವಿವರಗಳು:–**

1. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು– KCSR
2. ಕರ್ನಾಟಕ ಸರ್ಕಾರಿ ಸೇವಾ(ನಡತೆ) ನಿಯಮಗಳು 1966– Conduct Rules
3. ಕರ್ನಾಟಕ ಸರ್ಕಾರಿ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು 1974
4. ಕರ್ನಾಟಕ ಸರ್ಕಾರಿ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000–CRs
5. ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು 1957–CCA
6. ಕರ್ನಾಟಕ ಸರ್ಕಾರಿ ಸೇವಾ (ಪರಿವೀಕ್ಷಣಾ ) ನಿಯಮಗಳು 1977–Probation Rules
7. ಕರ್ನಾಟಕ ಸರ್ಕಾರಿ ಸೇವಾ (ಜೇಷ್ಠತಾ) ನಿಯಮಗಳು 1957– Seniority Rules
8. ಕರ್ನಾಟಕ ಸರ್ಕಾರಿ ಸೇವಾ(ಅನುಕಂಪದ ಆಧಾರದ ನೇಮಕಾತಿ)ನಿಯಮಗಳು 1996–CG appointment
9. ಕರ್ನಾಟಕ ಸರ್ಕಾರಿ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ)ನಿಯಮಗಳು 2012–CLT
10. ಕರ್ನಾಟಕ ಸರ್ಕಾರಿ ಸೇವಾ (ಬಡ್ತಿ, ವೇತನ, ನಿವೃತ್ತಿ ವೇತನ ವಿನಿಯಮನ)ಅಧಿನಿಯಮ 1973 PPP Act
11. ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977– General Recruitment Rules
12. ಕರ್ನಾಟಕ ಖಜಾನೆ ಸಂಹಿತೆ–KTC
13. ಕರ್ನಾಟಕ ಆರ್ಥಿಕ ಸಂಹಿತೆ–KFC
14. ಸಾದಿಲ್ವಾರು ವೆಚ್ಚಗಳ ಕೈಪಿಡಿ–MCE
15. ಆಯವ್ಯಯ –BM
16. ಭವಿಷ್ಯ ನಿಧಿ–GPF
17. ಕರ್ನಾಟಕ ಸರ್ಕಾರಿ ನೌಕರರ ಗುಂಪು ವಿಮೆ–GIS
18. ಕರ್ನಾಟಕ ಸರ್ಕಾರಿ ವಿಮೆ –KGID

Scanned by CamScanner